International Journal of Kannada Research
www.kannadajournal.com

ISSN: 2454–5813
IJKR 2023; 9(4): 177-181
© 2023 IJKR
www.kannadajournal.com
Received: 20-10-2023
Accepted: 23-11-2023

Karishma
Department of Kannada,
Karnataka State Akka Mahadevi
Women's University,
Vijayapura, Karnataka, India

ಗೀತಾ ನಾಗಭೂಷಣರ ಬದುಕು ಕಾದಂಬರಿಯಲ್ಲಿ – ದೇವದಾಸಿಯರ ಪಾತ್ರ ಚಿತ್ರಣ

Karishma

ಪೀಠಿಕೆ

ನಮ್ಮ ಸಮಾಜವು ಪುರುಷ ಪ್ರಧಾನ ವ್ಯವಸ್ಥೆಯಿಂದ ಕೂಡಿದೆ. ಇಲ್ಲಿ ಪುರುಷರು ಮಹಿಳೆಯನ್ನು ಅಬಲೆಯಂತೆ ಕಾಣುತ್ತಾರೆ. ಜೊತೆಗೆ ತಾವು ಹೇಳಿದ್ದೇ ವೇದವಾಕ್ಯ ಎಂಬಂತೆ ವರ್ತಿಸುತ್ತಾರೆ. ಇಂತಹ ವ್ಯವಸ್ಥೆಯಡಿಯಲ್ಲಿ ಮಹಿಳೆಯರು ಬಂಧಿಯಾಗಿ ಅಭಿವ್ಯಕ್ತಿಸ್ವಾತಂತ್ರ್ಯ ಕಳೆದುಕೊಂಡಿದ್ದಾರೆ. ಸಮಾಜದಲ್ಲಿ ವರ್ಗ, ವರ್ಣ, ಸಂಸ್ಕೃತಿ, ಸಂಪ್ರದಾಯ, ಎಂಬ ವ್ಯವಸ್ಥೆಯಿಂದಾಗಿ ಕೆಳವರ್ಗದವರು ಮೇಲ್ವರ್ಗದವರ ದಬ್ಬಾಳಿಕೆಗೆ ಒಳಗಾಗುತ್ತಿರುವುದನ್ನು ಕಾಣಬಹುದು. ಬಡವರು ಶ್ರೀಮಂತರಿಗೆ ಭಯಪಡುತ್ತ ಅವರ ಅನ್ಯಾಯವನ್ನು ಸಹಿಸಿಕೊಳ್ಳುತ್ತಾರೆ. ಗೀತಾ ನಾಗಭೂಷಣರ ಕಾದಂಬರಿಯಲ್ಲಿ ಅನ್ಯಾಯಕ್ಕೊಳಗಾದ ಮಹಿಳೆಯರು, ಅದು ಮಿತಿ ಮೀರಿದಾಗ ಅದನ್ನು ವಿರೋಧಿಸಿದ್ದನ್ನು ಕಾಣುತ್ತೇವೆ.

ಪುರುಷ ಪ್ರಧಾನ ವ್ಯವಸ್ಥೆ ಗಟ್ಟಿಯಾದದ್ದು ಎಂದರೆ ಹೆಣ್ಣಿಗೆ ತನ್ನ ದೇಹ, ಮನಸ್ಸುಗಳ ಮೇಲೂ ಹಕ್ಕಿಲ್ಲ, ಅದರಲ್ಲೂ ದಲಿತ ಜನಾಂಗದ ಹೆಣ್ಣು ಮಕ್ಕಳು ಅತಿ ಹೆಚ್ಚಾಗಿ ಶೋಷಣೆಗೆ ಒಳಗಾಗುತ್ತಾರೆ. ಪಟ್ಟ ಭದ್ರ ಹಿತಾಸಕ್ತಿಗೆ ಒಳಗಾದ ದುಷ್ಟ ಮನಸ್ಸುಗಳು ಮುಗ್ಧ ಹೆಣ್ಣು ಮಕ್ಕಳ ಬಾಳನ್ನು ಬಲಿ ತೆಗೆದುಕೊಳ್ಳುತ್ತಾರೆ. ದೇವರ ಹೆಸರಿನಲ್ಲಿ ಹೆಣ್ಣು ಮಕ್ಕಳನ್ನು ದೇವದಾಸಿಗೆ ಬಿಡುವ ಪದ್ಧತಿ ಎಷ್ಟು ಕ್ರೂರವಾದದ್ದು ಎಂದರೆ ಸಮಾಜದ ಆರೋಗ್ಯವನ್ನೇ ಹಾಳು ಮಾಡುವಂತಹ ಕೆಟ್ಟ ಪದ್ಧತಿ. ದೇವದಾಸಿ ಪದ್ಧತಿ ಯುವತಿಯರನ್ನು ದೇವರ ಸೇವೆಗೆ ಅರ್ಪಿಸುವ ಅನಿಷ್ಟ ಪದ್ಧತಿ. ಇದು ಮಹಿಳೆಯರನ್ನು ಸೂಳೆಗಾರಿಕೆಗೆ ಇಳಿಸುವಂತಹ ಕ್ರೂರ ಪದ್ಧತಿಯಾಗಿದೆ. ಗೀತಾ ನಾಗಭೂಷಣ ಅವರು ಬದುಕು ಕಾದಂಬರಿಯಲ್ಲಿ ದೇವದಾಸಿ ಮಹಿಳೆಯರ ಪಾತ್ರ ಚಿತ್ರಣವನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಅವರು ಅನುಭವಿಸುವ ನೋವು-ನಲಿವು, ಸುಖ-ದುಃಖವನ್ನು ಹಲವು ಪಾತ್ರಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಈ ಅನಿಷ್ಟ ಪದ್ಧತಿಗೆ ಕೆಳವರ್ಗದ ಮುಗ್ಧ ಮಹಿಳೆಯರು ಬಲಿಪಶುಗಳಾಗುತ್ತಿದ್ದಾರೆ. ಇಂದಿಗೂ ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿ, ಸವದತ್ತಿಯಲ್ಲಿ ಈ ದೇವದಾಸಿ ಪದ್ಧತಿ ಆಚರಣೆಯಲಿರುವುದು ತಿಳಿದುಬರುತ್ತದೆ. ಈ ಎರಡೂ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಇನ್ನೂ

Corresponding Author:
Karishma
Department of Kannada,
Karnataka State Akka Mahadevi
Women's University,
Vijayapura, Karnataka, India

ಅನೇಕ ಪ್ರದೇಶದಲ್ಲಿ ಈ ಅನಿಷ್ಟ ಪದ್ಧತಿ ರೂಢಿಯಲ್ಲಿದೆ. ಮನೆಯ ಹಿರಿಯ ಮಗಳನ್ನು ದೇವದಾಸಿಯಾಗಿ ಬಿಡದಿದ್ದರೆ ವಂಶೋದ್ಧಾರವಾವುದಿಲ್ಲ ಎಂಬ ಮೂಡನಂಬಿಕೆ ಜನಸಾಮಾನ್ಯರಲ್ಲಿ ಗಾಢವಾಗಿ ಬೇರೂರಿದೆ. ಮೇಲ್ವರ್ಗದವರ ಲಾಲಾಸೆಗೆ ಕೆಳವರ್ಗದ ಮಹಿಳೆಯರು ಬೋಗದ ವಸ್ತುವಾಗಿದ್ದಾರೆ. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ವೇಶ್ಯಾವಾಟಿಕೆಗೆ ತಳುವಂತಹ ದಲಿತ ಸಮಾಜದ ಕರಾಳ ಮುಖವನ್ನು ಲೇಖಕಿ 'ಬದುಕು' ಕಾದಂಬರಿಯಲ್ಲಿ ಅನಾವರಣಗೊಳಿಸಿದ್ದಾರೆ. ಮೇಲ್ವರ್ಗದವರು ಕೆಳವರ್ಗದ ಮಹಿಳೆಯರನ್ನು ಆಟಿಕೆಯ ವಸ್ತುವಾಗಿ ಬಳಸಿಕೊಳ್ಳುತ್ತಿದ್ದಾರೆ. ಇಲ್ಲಿ 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ' ಎನ್ನುವಂತೆ ಮೇಲ್ಜಾತಿಯ ಗೌಡ, ಕುಲಕರ್ಣಿಯರಿಗೆ ದಲಿತ ಮಹಿಳೆಯರು ಭೋಗದ ವಸ್ತುಗಳಾಗಿದ್ದಾರೆ. ಹೆಣ್ಣಿಗೂ ಕೂಡ ಅವಳದೇ ಆದ ಆಸೆ ಆಕಾಂಕ್ಷೆಗಳಿವೆ ಎನ್ನುವುದು, ತಿಳಿಯುವುದಿಲ್ಲವೇನೋ? ಪರಿಸ್ಥಿತಿಯ ವಿರುದ್ಧ ಪ್ರತಿಭಟಿಸಲಾರದೇ ಆಕೆ ದುಷ್ಟರ, ಸ್ವಾರ್ಥಿಗಳ ಕೈಗೆಸಿಕ್ಕು ಬದುಕನ್ನೆ ನಿರ್ನಾಮ ಮಾಡಿ ಕೊಳ್ಳುತ್ತಾಳೆ. ಇದು ಹೆಣ್ಣಿನ ಮೇಲೆ ನಡೆಯುವ ಮಾನಸಿಕ ಹಾಗೂ ದೈಹಿಕ ದೌರ್ಜನ್ಯ ಆದರೆ ಇಂದು ಎಚ್ಚೆತ್ತ ಮಹಿಳೆ ಅದನ್ನೆಲ್ಲ ಧಿಕ್ಕರಿಸುವತ್ತ ಹೊರಟ್ಟಿದ್ದಾಳೆ. 'ಬದುಕು' ಕಾದಂಬರಿಯಲ್ಲಿ 'ಜೋಗಣಿ' ಯೆಂದು ಹದಿಹರೆಯದ ಹೆಣ್ಣುಗಳನ್ನು ಮದುವೆ ಮಾಡದೇ ದೇವಿಯ ಸೇವೆಗೆಂದು ಸೂಳೆಗಾರಿಕೆಗೆ ಇಳಿಸೋದು ಇಂಥ ಅನಾಗರಿಕ, ಅಮಾನವೀಯ ಪೂಜಾರೀತಿಗಳು, ರಿವಾಜುಗಳು, ಮೇಲ್ಜಾತಿಯ ಹೆಣ್ಣು ಮಕ್ಕಳಿಗಿರಲಿಲ್ಲ. ಇದು ದಲಿತ ಮಹಿಳೆಯರಿಗೆ ಮಾತ್ರ ಸೀಮಿತವಾದ ನಿಯಮಗಳು.

'ಬದುಕು' ಕಾದಂಬರಿಯಲ್ಲಿಯೂ 'ನೀಲವ್ವ' ಜೋಗಣಿಯಾಗಿ ದೇವದಾಸಿ) ಪರಿಸ್ಥಿತಿಯ ಕೈಗೊಂಬೆಯಾಗಿ ಆತ್ಮಹತ್ಯೆ ಮಾಡಿಕೊಂಡರೆ, 'ದುರ್ಗಿ-ಮರ್ಗಿ' ಎಂಬುವರು ಜೋಗಣಿ ಧಂದೆಗೆ ತಮ್ಮನ್ನು ಒಗ್ಗಿಸಿಕೊಂಡು ಜೀವನ ಸಾಗಿಸುತ್ತಿದ್ದರು. ತುಳಜಾ ಮಾತ್ರ ನಿಂಬೆವ್ವಾಯಿಯ ವೈಚಾರಿಕತೆಯಿಂದಾಗಿ ತನ್ನ ಮನಸ್ಸು ಬದಲಾಯಿಸಿ, ಕೆಲವು ದಿನಗಳ ನಂತರ ಸಂಸಾರ ಹೂಡಿ, ಗರತಿಯರ ಹಾಗೇ ಜೀವನ ಮಾಡುವಳು ಅಲ್ಲದೆ ತಂದೆ-ತಾಯಿಯರ ಆಸರೆಯಾಗಿ, ಪಂಚಾಯ್ತಿಯ ನ್ಯಾಯವನ್ನು ಆಕೆ ಒಪ್ಪದೆ, ಪೂಜಾರಪ್ಪನ ಕುತಂತ್ರ ಅರಿತುಕೊಂಡು, ಅವನ ವ್ಯಭಿಚಾರವನ್ನೆಲ್ಲ, ಕೇರಿಯ ಮಂದಿಗೆಲ್ಲ ತಿಳಿಸಿ ಅವರ ನ್ಯಾಯಕ್ಕೆ ದೊಡ್ಡ 'ನಮಸ್ಕಾರ' ಮಾಡಿ ತನ್ನ ಮಗು, ಪತಿ ತಂದೆ ತಾಯಿಯೊಂದಿಗೆ ಊರನ್ನೇ ಬಿಟ್ಟು ತೆರಳುತ್ತಾಳೆ.

ದುರ್ಗಿಮರ್ಗಿಯರು ಚುಂಚೂರಿನ ಮಾದಕೆರಿಯ ಮಾನಿಂಗಪ್ಪನ ಅವಳಿಜವಳಿ ಹೆಣ್ಣು ಮಕ್ಕಳು, ಮಾನಿಂಗಪ್ಪ ಮಾಳವ್ವರಿಗೆ ಬಹಳ ವರ್ಷಗಳವರೆಗೆ ಮಕ್ಕಳೇ ಆಗಿರಲಿಲ್ಲ. ಮಾಪುರದೇವಿಯ ಗುಡಿಗೆ ಹೋಗಿ ನಮಸ್ಕಾರ ಮಾಡಿ, ಈ ರೀತಿ ಬೇಡಿಕೊಂಡು ಬಂದಿದ್ದರು ಚೊಚ್ಚಲ ಹೆಣ್ಣಾದ್ರೆ ತಾಯಿ ಸೇವೆಗೆ ಜೋಗಣಿ ಬಿಡುವುದು, ಗಂಡು ಮಗುವಾದರೆ ತಮಗೆ ಇರ್ಲಿ ಎಂದು ದೇವರಿಗೆ ಹರಕೆ ಹೊತ್ತಿದ್ದರು. ಹೀಗಾಗಿ ಹರಕೆ ಹೊತ್ತ ಒಂದು ವರ್ಷದೊಳಗೆ ಮಾಳವ್ವ ಗರ್ಭಿಣಿಯಾಗಿ ಒಮ್ಮೆ ಅವಳಿ-ಜವಳಿ ಹೆಣ್ಣು ಮಕ್ಕಳು ಜನಿಸಿದವು, ಅವುಗಳಿಗೆ ದುರ್ಗಿಮರ್ಗಿ ಎಂದು ಹೆಸರಿಟ್ಟರು.

ದೇವಿಯ ಹರಕೆಗಾಗಿ ಚೊಚ್ಚಿಲ ಹೆಣ್ಣು ಮಗಳನ್ನು ಜೋಗಣಿ ಬಿಡೋದು ಬೇಡಿಕೊಂಡಿದ್ದರಿಂದ ಯಾವ ಮಗಳಿಗೆ ಜೋಗಣಿ ಬಿಡಬೇಕೆಂದು ಸಮಸ್ಯೆ ಬಂದಾಗ ಕೇರಿಯ ಪಂಚರು 'ಎರಡು ಮಕ್ಕಳು ಚೊಚ್ಚಿಲ ಮಕ್ಕಳೇ ಇಬ್ಬರಿಗೂ ದೇವಿಸೇವೆಗೆ ಬಿಡಬೇಕು'. ಎಂದು ನ್ಯಾಯ ನೀಡಿದರು. ಹೀಗಾಗಿ ಮೈನೆರೆದ ಒಂದು ವರ್ಷದಲ್ಲೇ ಮಾಪುರತಾಯಿ ಜಾತ್ರೆಯ ಸಂದರ್ಭದಲ್ಲಿ ಅವರಿಗೆ ರೀತಿರಿವಾಜಿನಿಂದ ದೇವರಿಗೆ ಜೋಗಣಿ ಬಿಡಲಾಯಿತು. ದುರ್ಗಿಮರ್ಗಿಯರು ಹೆಣ್ಣಾಗಿ ಹುಟ್ಟಿದ ತಪ್ಪಿಗೆ ದಿನೇ-ದಿನೇ ನರಳುವಂತಹ ಪರಿಸ್ಥಿತಿ ಅವರದ್ದಾಗುತ್ತದೆ. ದೇವರ ಹೆಸರಿನಲ್ಲಿ ಜೋಗಣಿ ಮಾಡಿ ಸೂಳೆಗಾರಿಕೆ ಧಂದೆಗೆ ಇವರನ್ನು ಇಳಿಸಿದ ಸಮಾಜದ ವಾಸ್ತವಿಕ ಚಿತ್ರಣವನ್ನು ಅತ್ಯಂತ ಮಾರ್ಮಿಕವಾಗಿ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಈ ರೀತಿ ಗುಲ್ಬರ್ಗಾದ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ತಲೆಮಾರಿನಿಂದ ಜೋಗಣಿ ಪದ್ಧತಿ ಬೆಳೆದುಕೊಂಡು ಬಂದಿದೆ. ಯಾಕೆ ಈ ಪದ್ಧತಿ ಜಾರಿಗೆ ಬಂದಿದ್ದವು ಎಂಬುದರ ಬಗ್ಗೆ ಜನ ತಲೆಕೆಡಿಸಿಕೊಂಡವರೇ ಅಲ್ಲ. ತಮ್ಮ ಮಕ್ಕಳನ್ನು ದೇವರ ಹೆಸರಿನಲ್ಲಿ ಸ್ವತಹ ತಾವೇ ಗಂಡಸರ ಮಗ್ಗುಲಿಗೆ ಕಳುಹಿಸಿ ಸೂಳೆಗಾರಿಕೆ ದಂಧೆಗೆ ಇಳಿಸುತ್ತಿದ್ದರು. ಹೀಗೆ ಒಮ್ಮೆ ಜೋಗಣಿ ಅಂತ ಆದವಳು ಸಾಯುವವರೆಗೂ ಜೋಗಣಿ ಆಗಿಯೇ ಉಳಿಯಬೇಕು. ಅವಳು ಮದುವೆಯಾಗುವಂತಿರಲಿಲ್ಲ. ಅವಳಿಗೆ ಹುಟ್ಟುವ ಮಕ್ಕಳಿಗೆ ತಂದೆಯ ಹೆಸರಿರಲ್ಲ, ಅವರಿಗೆ ತಾಯಿಯೊಬ್ಬಳೇ ನಿಜ. ಇಂಥಹ ಅನಿಷ್ಟ ಆಚರಣೆಗಳಿಂದ

ಕೆಳವರ್ಗದ ಮಹಿಳಿಯರು ಬಾಳು ಸರ್ವನಾಶಗೊಳ್ಳುತ್ತಿದೆ. ದುರ್ಗಿಮರ್ಗಿಯರು ಜೋಗಣಿ ದಂಧೆಯಲ್ಲಿ ಪಳಗಿದವರು. ಊರಿನ ಜನರಿಗೆ ಮನೋರಂಜನೆಯ ಜೊತೆಗೆ ಭೋಗದ ವಸ್ತುವಾಗಿಯೂ ಪ್ರಚಲಿತವಾಗಿದ್ದರು.

ಸಮಾಜ ಹೆಣ್ಣನ್ನು ತಾಯಿ ಮಗಳು, ಹೆಂಡತಿ, ಮತ್ತು ವೇಶ್ಯೆಯರು ಎಂದು ನಾಲ್ಕು ಪಾತ್ರಗಳಲ್ಲಿ ಕಾಣುತ್ತಾರೆ. ಸುಂದರ ಹೆಣ್ಣನ್ನು ಕಂಡರೆ ಸಾಕು, ಹೆಣ್ಣನ್ನು ಕಂಡು ಬಾಯಿಗೆ ನೀರು ಬರುವಂತೆ ಹೆಣ್ಣನ್ನು ಕಂಡು ಜೊಲ್ಲು ಸುರಿಸುವರು. ಇಲ್ಲಿ ದುರ್ಗಿಮರ್ಗಿಯರ ಮೂಲಕ ಲೇಖಕಿ ಪಾತ್ರಗಳ ಹೊಸ ಸೃಷ್ಟಿಗೆ ಕೈಹಾಕಿ ಕಾದಂಬರಿಗೆ ಪೂರಕವಾಗುವಂತೆ, ಜೋಗಣಿಯರ ನೋವುಗಳನ್ನು ಹೇಳುತ್ತಾ ಅದು ಪುರುಷ ಪ್ರಧಾನ ಸಮಾಜ ತನಗಾಗಿ ಮಾಡಿಕೊಂಡಿರುವ ವ್ಯವಸ್ಥೆ ಎಂದು ಜೋಗಣಿಯರ ಪಾತ್ರಗಳ ಮೂಲಕ ನಿರೂಪಿಸುತ್ತಾರೆ.

ದುರ್ಗಿಮರ್ಗಿಯರು ಚೌಡಕಿ ಬಾರಿಸುತ್ತ ಹಾಡು ಹಾಡಿದರೆ ಅವರ ಧ್ವನಿ ಗಂಡಸರ ತಲೆಗೆ ನಶೆ ಏರಿಸುವಂಥದ್ದಾಗಿತ್ತು. ಸುತ್ತ ಮುತ್ತಲಿನ ಜನ ಮಾತು ಮರೆತು ಮೂಕರಾಗುತ್ತಿದ್ದರು.ಈ ಜೋಗಣಿಯರ ಹಾಡಿನ ಕೆಲವು ಸಾಲುಗಳನ್ನು ಇಲ್ಲಿ ಉದಾಹರಿಸಲಾಗಿದೆ.

"ಬನ್ನಿಗಿಡದ ಮಾಪುರಿ
ಬಯಲಾಗ ನಿನ್ ಜಾತರೀ
....
ಜೋಗಣಿ ಅಂತ ಬೈದವರ ಬಾಯಾಗ ಹುಳ ಬೀಳಸೀದಿ
ನೆತ್ತಿಮ್ಯಾಲೆ ಪರಡಿ ಹೊರಸಿ
ಗಲ್ಲಿ ಗಲ್ಲಿ ತಿರಗಿಸಿದೀ.....ಬನ್ನಿ ಗಿಡದ ಮಾಪುರೀ...
....
ನಿನ್ ಮೈಮಾ ನಾ ಯೇನು ಹಾಡಲೆವ್ವ
ಉಧೋ....ಉಧೋ....ಮಾಪುರೆವ್ವ......ಬನ್ನಿಗಿಡದಮಾಪುರಿ"[೧]

ಈ ರೀತಿ ಹಾಡಿನ ಮೂಲಕವಾಗಿಯೇ, ತಮ್ಮ ಹಾಗೂ ದೇವಿಯ ಮಹಿಮೆಯ ಕುರಿತು ಹಾಡುವರು. ಈ ಜೋಗಣಿಯರ ಹಾಡಿನ ದನಿಯಲ್ಲಿ ಮಗ್ನರಾಗಿ ಕೆಲವರು ಹಣವನ್ನು ನೀಡಿದರೆ, ಮತ್ತೇ ಕೆಲವರು ಅಂದಿನ ರಾತ್ರಿಯ ಊಟದ ವ್ಯವಸ್ಥೆ ಮಾಡಿಸಿದರು, ಮತ್ತೆ ಕೆಲವರು ಬಿಟ್ಟಿಯಾಗಿ ಸಿಂದಿಯನ್ನು ಕುಡಿಸುತ್ತಿದ್ದರು. ಹೀಗೆ ದುರ್ಗಿಮರ್ಗಿ ಜೋಗಿಣಿಯರ ಜೀವನದ ದಾರುಣ ಸ್ಥಿತಿಯನ್ನು ಲೇಖಕಿ 'ಬದುಕು' ಕಾದಂಬರಿಯಲ್ಲಿ ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಜಂಬಗಿ ಹಳ್ಳಿಯ ಮಾದರ ಪರಪ್ಪನ ಮಗಳು ತುಳಜಾಗೆ ನಿಂಬೆವ್ವಾಯಿ ಜೋಗಣಿ ಆಗುವುವವರ ಬಾಳು ಯಾವ ರೀತಿಯಿಂದ ಕೂಡಿದೆ ಎಂಬುದನ್ನು ಹೇಳುತ್ತಾಳೆ. ಏಕೆಂದರೆ ಆ ಬಾಳನ್ನು ಮುಪ್ಪಿನವರೆಗೂ ಅನುಭವಿಸಿದವಳು ನಿಂಬೆವ್ವಾಯಿ. ಹರೆಯದ ದಿನಗಳಲ್ಲಿ ಜೋಗಣಿಯ ಬಾಳು ಮೋಜಿನಿಂದ ಕೂಡಿರುತ್ತದೆ. ಯಾವಾಗ ಅವಳ ಹರೆಯ ಕುಸಿಯ ತೊಡಗುತ್ತದೆಯೋ ಆವಾಗ ಅವಳ ಗುಡಿಸಲಿಗೆ ಬರುವ ಗಿರಾಕಿಗಳ ಸಂಖ್ಯೆ ಕಡಿಮೆಯಾಗಲಾರಂಭಿಸುತ್ತದೆ. ಪಟ್ಟಕ್ಕೆ ಹಾಹಿಕೊಂಡು ಅವಳ ಮೈಯ ಮೀಸಲನ್ನು ಮುರಿದ ಗಂಡಸರು ಅವಳ ಬದುಕಿಗೆ ಆಸ್ತಿ-ಪಾಸ್ತಿ ಮಾಡಿ ಆಸರೆ ಕೊಡುವುದಿಲ್ಲ, ಅಂಥ ಜವಾಬ್ದಾರಿಯೂ ಅವನು ಹೊರುವುದಿಲ್ಲ, ಅವಳನ್ನು ಖಾಯಂ ಆಗಿ ಇಟ್ಟುಕೊಳ್ಳುವುದೂ ಇಲ್ಲ. ಒಂದಿಷ್ಟು ಹಣ, ಒಡವೆ, ವಸ್ತ್ರ ಕೊಟ್ಟು ಅವಳ ಕನ್ಯತ್ವ ಕಳೆದು ತನ್ನ ಮೈಯ ತಿಂಡಿಗಿ ಆಹುತಿ ತಗೊಂಡು ಬಿಡುವರು. ಆ ಮೇಲೆ ಅವನೂ ಬಂದರೂ ಬಿಟ್ಟರೂ ಅದು ಅವನ ಇಚ್ಛೆ, ಆದರೆ ಅವನು ಬಂದಾಗ ಮಾತ್ರ ಇವಳು ಬೇರೆ ಗಿರಾಕಿಗಳನ್ನು ದೂರ ಸರಿಸಿ, ಅವನನ್ನೇ ಕರೆದುಕೊಳ್ಳಬೇಕು.

ಮೊದಮೊದಲು ಮಜಾ ಕೊಡುವ ಈ ದೇವಿಯ ಸೇವೆ ನಂತರ ಬೇಕಾಬಿಟ್ಟಿಯಾಗಿ, ಆ ಮೇಲೆ ಕಷ್ಟವಾಗಿ, ಕೊನೆಗೆ ಸಾಕು ಸಾಕಾಗಿ ಹೋಗುತ್ತದೆ. ಜೋಗಣಿಯಾದ ಹೆಂಗಸು ತಲೆಯ ಮೇಲೆ ದೇವಿಯ ಪರಡಿಯ ಅಗಲವಾದ ಬುಟ್ಟಿ ಹೊತ್ತುಕೊಂಡು, ಕೊರಳಲ್ಲಿ ಕವಡೆ ಸರ ಹಾಕಿಕೊಂಡು, ದೇವಿಯ ಪಾದದ ಬೆಳ್ಳಿ ಪದಕಗಳನ್ನು ಹಾಕಿಕೊಂಡು, ಬಗಲಲ್ಲಿ ಚೌಡಕಿ ಹಿಡಿದು ಭಾರಿಸುತ್ತ, ಹಾಡುತ್ತ, ಊರೂರು, ಗಲ್ಲಿಗಲ್ಲಿ, ಮನೆ ಮನೆ, ರಸ್ತೆ ರಸ್ತೆ ತಿರುಗುತ್ತ ಜೋಗದ ಹೆಸರಿನಲ್ಲಿ ಬಿಕ್ಕಿ ಬೇಡಬೇಕು. ಮಂದಿ ನೀಡುವ ಹಿಟ್ಟು, ಜೋಳ, ಅಕ್ಕಿ ಚಿಲ್ಲರೆ ಹಣದಿಂದಲೇ ಇವಳ ಹೊಟ್ಟೆ ತುಂಬಿಸಬೇಕು. ಹಗಲು ಈ ಗತಿಯಾದರೆ ರಾತ್ರಿಯದು ಬೇರೆಯೇ ಪರಿ. ಅಪ್ಪಟ ಸೂಳೆಗಾರಿಕೆಯೇ ಧಂದೆ ನಡೆಯುತ್ತದೆ. ಬಂದ ಗಂಡಸರಿಗೆ ಸೆರಗು ಒಡ್ಡಿ ಅವರಿಗೆ ಸುಖವನ್ನು ನೀಡಬೇಕು. ವಯಸ್ಸಾದ ನಂತರ ಈ ಜೋಗಣಿಯರ ಗತಿ ನಿರ್ಗತಿಯಾಗುತ್ತದೆ. ಎಂದು ಜಂಬಗಿಯ ಮುದಿ ಜೋಗಣಿ ನಿಂಬೆವ್ವಾಯಿ ತುಳವ್ವಗೆ ಅಳುತ್ತಾ ಹೇಳಿದ್ದಳು. "ನೀ ನಿಮ್ಮಪ್ಪನ ಮಾತಿಗಿ ಮಣಿದು ಜೋಗಣಿ ಆಗ ಬ್ಯಾಡ

ಪೋರೀ...ಇಸಾ ತಗೊಂಡು ಸಾಯದು ಬೇಕು, ಆದರ ಈ ಜೋಗಣಿ ಆಗಾದು ಬ್ಯಾಡವ್ವೋ........"[೨] ಅಂತ ಕಣ್ಣೀರು ಹಾಕಿದಳು.

ಮಾಪುರ ತಾಯಿ ಇಚ್ಛೆಯ ಮೇರೆಗೆ ನೀನು ತಾಯಿಯ ಸೇವೆಮಾಡಲು ನಿಂತವಳು. ನಿನ್ನ ಬಾಯಲ್ಲಿ ಇಂತಹ ಮಾತೇಕೆ ? ಎಂದು ತುಳುಜಾ ನಿಂಬೆವ್ವಾಯಿಗೆ ಕೇಳಿದಳು. ಆಗ ನಿಂಬೆವ್ವಾಯಿ ತಾಯಿ ಮಕ್ಕಳನ್ನು ಮಾರ್ಯದೆ ಬಿಟ್ಟು ಸೂಳೆಗಾರಿಕೆ ಧಂದೆ ಮಾಡಿಕೊಂಡು ತಿರುಗಿ ಎಂದು ಹೇಳುವುದಿಲ್ಲ ಬದಲಿಗೆ ಮದುವೆ ಮಾಡಿಕೊಂಡು ಗರತಿಯಾಗಿ ಜೀವನ ಮಾಡು ಎಂದು ಹೇಳುತ್ತಾಳೆ. ಆ ದೇವರು ಹೆಣ್ಣು ಮಕ್ಕಳನ್ನು ಜೋಗಣಿಯಗಬೇಕೆಂದು ಹೇಳುವುದು ನಿಜವಾಗಿದ್ದರೆ, ಮೇಲ್ಜಾತಿಯ ಹೆಂಗಸರು ಯಾರು ಜೋಗಣಿಯಾಗಿದ್ದಾರೆ? ಕೆಳಜಾತಿಯ ಹೆಂಗಸರೆ ಜೋಗಣಿಯರಾಗಿ ಎಂದು ದೇವರು ಹೇಳುತ್ತಾರೆಯೋ? ಎಂದು ನಿಂಬೆವ್ವಾಯಿ ತುಳುಜಾಳಿಗೆ ಕೇಳಿದಳು.

ಇದೆಲ್ಲ ಪೂಜಾರಪ್ಪನ ಕಿತಾಪತಿ ಆತ 'ಊರ ಗೌಡ, ಕುಕ್ಕಣಿ, ಶೆಟ್ಟಿ ಸಾವ್ಕಾರರ ಚಾಕರಿ ಕೆಲಸ ಮಾಡುತ್ತಾನೆ. ಅವರು ಕೊಡುವ ಸಿಂದಿಗೆ ಆಸೆ ಪಟ್ಟು ಅವರು ಹೇಳಿದಂತೆ ಕುಣಿಯುತ್ತಾನೆ. ಪೂಜಾರಪ್ಪನ ಮೈ ಮೇಲೆ ದೇವಿ ಬರುತ್ತಾಳೆ ಎಂದು ಮೈ ತೂಗಿಸುತ್ತ ಆ ಗೌಡ, ಕಲಕರ್ಣಿಯರು ಹೇಳಕೊಟ್ಟಂತೆ ಕೇರಿಯ ಸುಂದರ ಹುಡುಗಿಯರನ್ನು ಜೋಗಣಿಯರಾಗಲು ದೇವರ ಹೆಸರಿನಲ್ಲಿ ಹೇಳಿಕೆ ಹೇಳುತ್ತಾನೆ. ಇಂತಹ ರಾಕ್ಷಸರ ಮಾತುಗಳಿಗೆ ನಾನು ಕೂಡ ಬಲಿಯಾಗಿದ್ದೆನೆ, ನೀನು ಈ ಜೋಗಣಿ ಎಂಬ ಬಲೆಗೆ ಬೀಳಬೇಡ, ಜೋಗಣಿ ಆಗಬೇಡ ಎಂದು ನಿಂಬೆವ್ವಾಯಿ ತುಳಜಾಗೆ ಹೇಳಿದಳು. ಹಾಗೆಯೇ ತಾನು ಹೇಳಿದ ಈ ಗುಟ್ಟನ್ನು ಯಾರಿಗೂ ಹೇಳದೆ ತನ್ನ ಪ್ರಾಣ ಉಳಿಸುವಂತೆ ನಿಂಬೆವ್ವಾಯಿ ತುಳಜಾಗೆ ಕೇಳಿಕೊಳ್ಳುತ್ತಾಳೆ.

ಆದರೆ ತುಳಜಾ ಕೂಡ ಚುಂಚೂರು ಮಾಪುರ ದೇವಿಗೆ ಹರಕೆಯ ಬಲಿಯಾಗಿ ಜೋಗಣಿಯಾದಳು ಆರೆಂಟು ತಿಂಗಳಾದರೂ ಆಕೆಗೆ ಜೋಗಣಿಯ ಬದುಕು ನಿರ್ವಹಿಸಲಾಗದೆ ವಿಲವಿಲ ಒದ್ದಾಡುತ್ತಿದ್ಧಳು. ಒಂದು ದಿನ ಕಲಬುರ್ಗಿಯ ಸಂತೆಗೆ ಹೋದಾಗ ತುಳಜಾ ಕುಣಿಯುತ್ತ ದೇವಿಯ ಹಾಡು ಹಾಡುತ್ತಿದ್ದಾಗ, ಅವಳ ಧ್ವನಿ, ಸೌದರ್ಯ, ಚೆಲುವಿಕೆಗೆ ಹುಸನಪ್ಪ ಮರಳಾಗುತ್ತಾನೆ. ಆಕೆಯನ್ನು ವಿವಾಹ ಆಗುವುದಾಗಿ ಪ್ರಸ್ತಾಪಿಸಿದನು. ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಕೆಳಜಾತಿಯಲ್ಲಿ ಹುಸನಪ್ಪ ಜನಿಸಿದ್ದನ್ನು. ತಂದೆ-ತಾಯಿ ಯಾರು ಇರಲಿಲ್ಲ ಒಬ್ಬಂಟಿಗನಾಗಿದ್ದನು. ಆರು ವರ್ಷಗಳ ಹಿಂದೆ ಮುಂಬೈಗೆ ಹೋಗಿ ಅಲ್ಲಿ ಮನೆ ಕಟ್ಟುವ ಕೆಲಸದಲ್ಲಿ ಮೇಸ್ತ್ರಿಗಳ ಕೈಕೆಳಗೆ ಕೆಲಸ, ಮಾಡುತ್ತಿದ್ದನು. ವರ್ಷಕ್ಕೊಮ್ಮೆ ತನ್ನ ಊರಿಗೆ ಬಂದು ಹೋಗುತ್ತಿದ್ದನು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಹುಸನಪ್ಪ ತಂದೆ-ತಾಯಿ ಇಲ್ಲದವನು, ಆದರೆ ಅವರೆಲ್ಲ ಬದುಕಿದ್ದರೆ ಜೋಗಣಿಯಾದ ತುಳಜಾಳನ್ನು ವಿವಾಹವಾಗಲು ಒಪ್ಪುತ್ತಿದ್ದರೋ? ಆದರೂ ಆಧುನಿಕ ಶಿಕ್ಷಣದಿಂದಾಗಿ, ವೈಚಾರಿಕ ನಿಲುವಿನಿಂದ ಹುಸನಪ್ಪನ ಮಾತುಗಳು, ಒಮ್ಮೊಮ್ಮೆ ಬಹಳ ಮೌಲ್ಯಯುತವಾಗಿ ತೋರುತ್ತವೆ. ತುಳಜಾ ಹುಸನಪ್ಪನನ್ನು ವಿವಾಹವಾಗಿ ಒಂದು ಹೊಸ ಜಗತ್ತಿಗೆ ಪಾದರ್ಪಣೆ ಮಾಡಿದಳು. ತುಳಜಾ ಜೋಗಣಿಯಾಗಿದ್ದನ್ನು ಬಿಟ್ಟು ಗರತಿಯಾಗಿದ್ದ ವಿಷಯವನ್ನು ತಿಳಿದ ದೈವದವರು ತುಳಜಾನ ಕುಟುಂಬಕ್ಕೆ ದಂಡ ವಿಧಿಸಿ ಕೇರಿಯಿಂದ, ಕುಲದಿಂದ ಹೊರಗಿಡಲು ತೀರ್ಪು ನೀಡುತ್ತಾರೆ. ಆದರೆ ತಳುಜಾ ಈಡೀ ದೈವದವರ ನಿರ್ಣಯವನ್ನು ಧಿಕ್ಕರಿಸಿ ತನ್ನ ತಂದೆ-ತಾಯಿಯನ್ನು ತನ್ನೊಡನೆ ಮುಂಬೈಗೆ ಕರೆದುಕೊಂಡು ಹೋಗುತ್ತಾಳೆ.

"ತನಗೆ ಇದು ತಪ್ಪು, ಅನ್ಯಾಯ ಅನಿಸಿದ್ದನ್ನು ವ್ಯಕ್ತ ಮಾಡುವದೇ ಪ್ರತಿಭಟನೆ"[೩] ತುಳಜಾ ಪಂಚಾಯಿತಿಯ ವಿರುದ್ಧ ಆಡಿದ ಮಾತುಗಳು, ಪ್ರತಿಭಟಿಸಿದ ರೀತಿ, ತೋರಿಸಿದ ಧೈರ್ಯ ಸಮಾಜದಲ್ಲಿ ಶೋಷಣೆಗೆ ಒಳಗಾಗುತ್ತಿರುವ ಸ್ತ್ರೀಯರಿಗೆ ನಿದರ್ಶನವಾಗುತ್ತದೆ.

ನೀಲವ್ವ ಕೂಡ ಜೋಗಣಿ ಆಗುವುದಿಲ್ಲವೆಂದು ಪ್ರತಿಭಟಿಸಿದ್ದು ಕೂಡ ಬದುಕು ಕಾದಂಬರಿಯಲ್ಲಿ ಕಾಣಬಹುದು. ಆದರೆ ನೀಲವ್ವನ ಪ್ರತಿಭಟನೆಯ ಧ್ವನಿಗೆ ನ್ಯಾಯ ದೊರೆಯಲಿಲ್ಲ. ಸಮಾಜದ ಅನಿಷ್ಟ ನಿಯಮದ ವಿರುದ್ಧ ಹೋರಾಡಿ ಕೊನೆಗೆ ಜೋಗಣಿಯಾಗುದಿಲ್ಲವೆಂದು ಆತ್ಮ ಹತ್ಯೆ ಮಾಡಿಕೊಂಡಳು. ಮೇಲ್ವರ್ಗಗಳ ಹಿಂಸೆಗೆ, ಕ್ರೌರಕ್ಕೆ, ಶೋಷಣೆಗೆ ಬಲಿಯಾಗುವ ಹೆಣ್ಣು ಮಕ್ಕಳಲ್ಲಿ ನೀಲವ್ವ, ತುಳಜಾರ ಪಾತ್ರಗಳ ಪ್ರತಿಭಟನೆ ವಾಚಕರ ಮೇಲೆ ತೀವ್ರ ಪ್ರಭಾವ ಬೀರುತ್ತದೆ.

ಈ ರೀತಿಯಾಗಿ ದೇವರ ಹೆಸರಿನಲ್ಲಿ ಮಹಿಳೆಯರನ್ನು ಜೋಗಣಿಯರನ್ನಾಗಿ ಸೂಳೆಗಾರಿಕೆ ದಂಧೆಗೆ ಇಳಿಸುತ್ತಿದ್ದ ಸಮಾಜದ ಚಿತ್ರಣವನ್ನು ಅತ್ಯಂತ ಮಾರ್ಮಿಕವಾಗಿ ಗೀತಾ

ನಾಗಭೂಷಣರು 'ಬದುಕು' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಈ ಜೋಗಣಿ ದಂಧೆಯಿಂದ ಹೊರಬರಲು ತುಳಜಾ ಹೋರಾಟಕ್ಕಿಳಿದು ಜಯವನ್ನು ಸಾಧಿಸಿದರೆ, ನೀಲವ್ವ ಪ್ರತಿಭಟಿಸಿ ಅಪಜಯವನ್ನು ಕಂಡು ಆತ್ಮಹತ್ಯೆಯನ್ನು ಮಾಡಿಕೊಂಡಿರುವ ಕರಾಳ ಸತ್ಯವನ್ನು ಕಾದಂಬರಿಯದುದ್ದಕ್ಕೂ ನೋಡಬಹುದು. ದಲಿತ ಮಹಿಳೆಯರ ಮೇಲೆ ಸಂಪ್ರದಾಯದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ನಿರಂತರವಾಗಿ ಶೋಷಣೆ ನಡೆಯುತ್ತ ಬಂದಿದೆ. ಈ ಶೋಷಣೆಯ ವಿರುದ್ಧ ಸಿಡಿದೆದ್ದ ದಿಟ್ಟ ಮಹಿಳೆ ಗೀತಾ ನಾಗಭೂಷಣ.

ಅಡಿಟಿಪ್ಪಣಿ

1. ಬದುಕು, ಗೀತಾ ನಾಗಭೂಷಣ, ಸಪ್ನಬುಕ್ ಹೌಸ್ ಬೆಂಗಳೂರು,೨೦೨೧ - ಪು.ಸಂ ೨೨೫
2. ಬದುಕು, ಗೀತಾ ನಾಗಭೂಷಣ, ಸಪ್ನಬುಕ್ ಹೌಸ್ ಬೆಂಗಳೂರು,೨೦೨೧ - ಪು.ಸಂ ೨೨೯
3. ಸಾದರ ಬಸವರಾಜ(ಸಂ), ಮೇಘ ಮಂದಾರ, ಲೇ; ಪ್ರತಿಭಟನೆ, ರಹಮತ್ ತರಕೇರಿ - ಪು.ಸಂ ೪೯